# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 185 | Pages. 2 | Date: 02-07-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 185 - ಪುಟಗಳು : 2 02-07-2026 ಗುರುವಾರ | Ph: 8762954248 | ದರ : ₹1

## ನೂರು ದಿನಗಳಲ್ಲಿ ಎತ್ತಿನಹೊಳೆ ಭೂಸ್ವಾಧೀನ ಸಮಸ್ಯೆ ಇತ್ಯರ್ಥ: ಸಚಿವ ರಾಮಲಿಂಗಾರೆಡ್ಡಿ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ (ಬೇಲೂರು): ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಹಾಸನ ಜಿಲ್ಲೆಗಳಿಗೆ ನೀರು ಒದಗಿಸುವ ಮಹತ್ವಾಕಾಂಕ್ಷಿ 'ಎತ್ತಿನಹೊಳೆ ಯೋಜನೆ'ಯ ಭೂಸ್ವಾಧೀನ ಸಮಸ್ಯೆಗಳನ್ನು ಮುಂದಿನ ನೂರು ದಿನಗಳಲ್ಲಿ ಬಗೆಹರಿಸುವುದಾಗಿ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದ್ದಾರೆ.

ಹಾಸನ ಜಿಲ್ಲೆ ಬೇಲೂರು ತಾಲೂಕಿನ ಐದಳ್ಳಕಾವಲಿನಲ್ಲಿ ಎತ್ತಿನಹೊಳೆ ಯೋಜನಾ ಕಾಮಗಾರಿಯನ್ನು ಪರಿಶೀಲಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಯೋಜನೆಗೆ ಇದೀಗ ಸ್ಪಷ್ಟ ರೂಪ ಸಿಗುತ್ತಿದೆ ಎಂದು ತಿಳಿಸಿದರು.

### ಎತ್ತಿನಹೊಳೆ ಕಾಮಗಾರಿಗೆ ವೇಗ

"ಯೋಜನೆಯ ಮೂರು ಕಡೆಗಳಲ್ಲಿ ಭೂಸ್ವಾಧೀನದ ಸಮಸ್ಯೆ ಇತ್ತು. ರೈತರಿಗೆ ಸೂಕ್ತ ಪರಿಹಾರ ನೀಡಿ ಭೂಮಿ ಪಡೆಯಲಾಗುವುದು. ಮುಂದಿನ 10 ದಿನಗಳಲ್ಲಿ ಸಹಾಯಕ ಆಯುಕ್ತರು (ಎಸಿ) ಹಾಗೂ ಜಿಲ್ಲಾಧಿಕಾರಿಗಳು ಈ ಕುರಿತ ಸಮಸ್ಯೆಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದ್ದಾರೆ. ಒಂದೊಮ್ಮೆ ಈ ಸಮಸ್ಯೆ ಬಗೆಹರಿದರೆ ಬರೋಬ್ಬರಿ 171 ಕಿ.ಮೀ. ವರೆಗೆ ನೀರು ಹರಿಯಲಿದೆ. ಸಿ.ಎಂ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸಿದ ಬಳಿಕ ಹಾಕಿಕೊಂಡ 100 ದಿನಗಳ ಟಾರ್ಗೆಟ್‌ನಲ್ಲಿ ಈ ಯೋಜನೆಯೂ ಸೇರಿದೆ," ಎಂದು ಸಚಿವರು ವಿವರಿಸಿದರು.

"ಒಟ್ಟು 23 ಸಾವಿರ ಕೋಟಿ ರೂ. ವೆಚ್ಚದ ಈ ಕಾಮಗಾರಿಗೆ ಇದುವರೆಗೆ 18 ಸಾವಿರ ಕೋಟಿ ರೂ. ಖರ್ಚಾಗಿದೆ. ಎತ್ತಿನಹೊಳೆ ಯೋಜನೆಯ 259 ಕೋಟಿ ರೂ. ವಿದ್ಯುತ್ ಬಿಲ್ ಬಾಕಿ ವಿಚಾರವೂ ನಮ್ಮ ಇಲಾಖೆಗೆ ಸಂಬಂಧಿಸಿದ್ದು, ಅದನ್ನು ನಾವೇ ಬಗೆಹರಿಸಿಕೊಳ್ಳುತ್ತೇವೆ. ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನದ ಕುರಿತು ಜಲಶಕ್ತಿ ಸಚಿವರನ್ನು ಭೇಟಿಯಾಗಿ ಮನವಿ ಮಾಡಲಾಗಿದ್ದು, ಹಂತ ಹಂತವಾಗಿ ಹಣ ಬಿಡುಗಡೆಯಾಗುವ ವಿಶ್ವಾಸವಿದೆ," ಎಂದರು.

### ಹೇಮಾವತಿ ನಾಲೆ ಹಾಗೂ ಸಂಪುಟ ವಿಸ್ತರಣೆ

ಹೇಮಾವತಿ ಲಿಂಕ್ ಕೆನಾಲ್ ನಾಲೆಗೆ ಶಾಸಕ ಗುಬ್ಬಿ ಶ್ರೀನಿವಾಸ್ ಅವರ ವಿರೋಧದ ಕುರಿತು ಪ್ರತಿಕ್ರಿಯಿಸಿದ ಅವರು, "ನೀರು ಬರುತ್ತಿಲ್ಲ, ಆಗಬೇಕು ಎಂದು ಒಬ್ಬರು, ನೀರು ಕಡಿಮೆಯಾಗುತ್ತದೆ ಎಂದು ಮತ್ತೊಬ್ಬರು ಹೇಳುತ್ತಿದ್ದಾರೆ. ಇಬ್ಬರು ಶಾಸಕರೊಂದಿಗೂ ಕುಳಿತು ಮಾತನಾಡಿ ಸಮಸ್ಯೆ ಬಗೆಹರಿಸಿಕೊಳ್ಳುತ್ತೇವೆ. ಇನ್ನು, ರಾಜ್ಯ ಸಚಿವ ಸಂಪುಟ ವಿಸ್ತರಣೆ ಆದಷ್ಟು ಬೇಗ ಆಗಲಿದೆ. ಶಿವಲಿಂಗೇಗೌಡರಂತಹ ಹಿರಿಯ ಶಾಸಕರು ಹಲವರಿದ್ದು, ಆಕಾಂಕ್ಷಿಗಳಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಗೂ ಪ್ರಾತಿನಿಧ್ಯ ಸಿಗಬೇಕು ಎಂದು ನಾನು ಹೇಳುತ್ತೇನೆ. ಆದರೆ, ವೈಯಕ್ತಿಕವಾಗಿ ನಾನೇ ಖುದ್ದಾಗಿ ಯಾವುದೇ ಖಾತೆಯನ್ನು ಕೇಳಿಲ್ಲ, ಕೇಳುವ ಅಭ್ಯಾಸವೂ ನನಗಿಲ್ಲ," ಎಂದು ಸ್ಪಷ್ಟಪಡಿಸಿದರು.

### ವಿಪಕ್ಷಗಳ ಟೀಕೆಗೆ ತಿರುಗೇಟು

ಸರ್ಕಾರಿ ಖಜಾನೆ ಖಾಲಿಯಾಗಿದೆ, ಹೀಗಾಗಿ ಗ್ಯಾರಂಟಿ ಯೋಜನೆ ಪರಿಷ್ಕರಣೆ ಮಾಡುತ್ತಿದ್ದಾರೆ ಎಂಬ ವಿಪಕ್ಷ ನಾಯಕ ಆರ್. ಅಶೋಕ್ ಆರೋಪಕ್ಕೆ ತಿರುಗೇಟು ನೀಡಿದ ಸಚಿವರು, "ಬಿಜೆಪಿಯವರು ಆಡಳಿತ ನಡೆಸುವ ಆಂಧ್ರಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನದಂತಹ ರಾಜ್ಯಗಳಲ್ಲೂ ಇಂತಹ ಯೋಜನೆಗಳನ್ನು ಕೊಟ್ಟಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದ ಮನ್‌ಮೋಹನ್ ಸಿಂಗ್ ಅಧಿಕಾರದಿಂದ ಇಳಿಯುವವರೆಗೆ 53 ಲಕ್ಷದ 10 ಸಾವಿರ ಕೋಟಿ ಇದ್ದ ದೇಶದ ಸಾಲ, ಇದೀಗ ಮೂರು ಪಟ್ಟು ಹೆಚ್ಚಾಗಿದೆ. ಅಶೋಕ್ ಅವರು ಮೊದಲು ಇದರ ಬಗ್ಗೆ ಮಾತನಾಡಲಿ. ಗ್ಯಾರಂಟಿ ಯೋಜನೆಗಳ ದುರುಪಯೋಗ ತಡೆಯಲು, ಸತ್ತವರ ಹೆಸರಿನಲ್ಲಿ ಹಣ ಪಡೆಯುವುದನ್ನು ನಿಲ್ಲಿಸಲು ಹಾಗೂ ಎಸ್‌ಸಿ/ಎಸ್‌ಟಿ ಅನುದಾನವನ್ನು ಅದೇ ವರ್ಗಕ್ಕೆ ಸರಿಯಾಗಿ ಬಳಸಲು ಜಾತಿ ಪ್ರಮಾಣ ಪತ್ರ ಕೇಳಲಾಗುತ್ತಿದೆಯೇ ಹೊರತು, ಬೇರಾವ ಉದ್ದೇಶಕ್ಕೂ ಅಲ್ಲ. ಇದರಲ್ಲಿ ಸ್ಪಷ್ಟತೆ ಇರಬೇಕು ಅಷ್ಟೇ," ಎಂದು ಸಮರ್ಥಿಸಿಕೊಂಡರು.

### ಮೇಕೆದಾಟು ಮತ್ತು ಕಾವೇರಿ ವಿಚಾರ

"ಮೇಕೆದಾಟು ಯೋಜನೆಯ ಡಿಪಿಆರ್ ಸಿದ್ಧವಾಗಿದೆ. ತಮಿಳುನಾಡು ಈ ಹಿಂದೆ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಮೇಲ್ಮನವಿಗಳೆಲ್ಲಾ ವಜಾಗೊಂಡಿವೆ. ಈ ಯೋಜನೆಯಿಂದ ನಾವು ಕೇವಲ 4.75 ಟಿಎಂಸಿ ಕುಡಿಯುವ ನೀರನ್ನು ಮಾತ್ರ ಬಳಸಿಕೊಳ್ಳುತ್ತೇವೆ ಮತ್ತು 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ. ಒಂದು ಎಕರೆಗೂ ನಾವು ನೀರನ್ನು ನೀರಾವರಿಗೆ ಬಳಸುವುದಿಲ್ಲ. ಈ ಯೋಜನೆಯಿಂದ ತಮಿಳುನಾಡಿನ ರೈತರಿಗೂ ಅನುಕೂಲವಿದೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಇನ್ನು, ತಮಿಳುನಾಡಿಗೆ ಕಾವೇರಿ ನೀರು ಬಿಡುವ ವಿಚಾರವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನಿರ್ಧರಿಸುತ್ತದೆ. ನಮ್ಮಲ್ಲಿನ ನೀರಿನ ಲಭ್ಯತೆ ಮತ್ತು ಕುಡಿಯುವ ನೀರಿನ ಅಗತ್ಯವನ್ನು ಆಧರಿಸಿ ತೀರ್ಮಾನ ಕೈಗೊಳ್ಳಲಾಗುತ್ತದೆ. ಶೀಘ್ರದಲ್ಲೇ ಮಳೆಯಾಗಿ ಡ್ಯಾಂಗಳು ಭರ್ತಿಯಾಗಲಿ ಎಂದು ಆಶಿಸೋಣ," ಎಂದು ಸಚಿವರು ತಿಳಿಸಿದರು.

## ಪಂಚಭೂತಗಳಲ್ಲಿ ಲೀನವಾದ ಮೇರು ಕಲಾವಿದ ಕೆಟಿಎಸ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅನಾರೋಗ್ಯದಿಂದ ಅಗಲಿದೆ ಜಿಲ್ಲೆಯ ಹೆಮ್ಮೆಯ ಕಲಾವಿದ ಕೆ.ಟಿ.ಶಿವಪ್ರಸಾದ್ ಅವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ನೆರವೇರಿತು. ಅವರ ಆಶಯದಿಂದ ಯಾವುದೇ ಸಂಪ್ರದಾಯ ಇಲ್ಲದೆ, ಬಿಟ್ಟಗೌಡನಹಳ್ಳಿಯ ಚಿತಾಗಾರದಲ್ಲಿ ಅವರ ಚಿತೆಗೆ ಅಗ್ನಿ ಸ್ಪರ್ಶ ಮಾಡಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಇದಕ್ಕೂ ಮುನ್ನ ನಗರದ ಕಲಾಭವನದ ಮುಂಭಾಗ ಬೆಳಗ್ಗೆಯಿಂದ ಮಧ್ಯಾಹ್ನದ ವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ, ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಹೆಚ್.ಎಲ್.ಮಲ್ಲೇಶಗೌಡ, ಎಎಸ್ಪಿ ಶ್ರೀನಿಧಿ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಹಿರಿಯ ದಲಿತ ಮುಖಂಡರಾದ ನಾರಾಯಣ ದಾಸ್, ಹೆಚ್.ಕೆ.ಸಂದೇಶ್, ಕೃಷ್ಣದಾಸ್, ಈರಯ್ಯ, ವಿಜಯಕುಮಾರ್, ಹಿರಿಯ ಪತ್ರಕರ್ತರಾದ ಎಂ.ವಿ.ಶಿವರಾಂ, ಎನ್.ನಂಜುಂಡೇಗೌಡ, ಬಿ.ಆರ್.ಉದಯಕುಮಾರ್, ರವಿ ನಾಕಲಗೂಡು, ಹೆತ್ತೂರು ನಾಗರಾಜ್, ಲೀಲಾವತಿ, ಬಿ.ಆರ್.ಬೊಮ್ಮೇಗೌಡ, ಡಾ.ಎಂ.ಎಸ್ ಶೇಖರ್, ಸಾಹಿತಿಗಳಾದ ಬಾನು ಮುಷ್ತಾಕ್, ರೂಪಾ ಹಾಸನ, ಕೆ.ಟಿ.ಜಯಶ್ರೀ, ವಿವಿಧ ಸಂಘಟನೆಗಳ ಕಣಗಾಲ್ ಮೂರ್ತಿ, ಎಂ.ಜಿ. ಪೃಥ್ವಿ, ಮರಿಜೋಸೆಫ್, ಕಲಾವಿದರಾದ ದೇಸಾಯಿ, ಗ್ಯಾರಂಟಿ ರಾಮಣ್ಣ, ನಾಯಕರಹಳ್ಳಿ ಮಂಜೇಗೌಡ, ಡಿಸಿ ಕಚೇರಿ ತಹಸೀಲ್ದಾರ್ ರಮೇಶ್, ಸಮಾಜಸೇವಕ ಕಂಚಮಾರನಹಳ್ಳಿ ಕಾಂತರಾಜು, ಕರ್ನಾಟಕ ಲಲಿತಾ ಅಕಾಡೆಮಿ ಮಾಜಿ ಅಧ್ಯಕ್ಷ ಕೃಷ್ಣಶೆಟ್ಟಿ ಮೊದಲಾದವರು ಅಂತಿಮ ದರ್ಶನ ಪಡೆದರು. ಅವರ ಶ್ರೀಮತಿ ಸುವರ್ಣ ಹಾಗೂ ಕೆಟಿಎಸ್ ಅವರ ಕುಟುಂಬ ಸದಸ್ಯರು ಹಾಜರಿದ್ದರು.

ಈ ವೇಳೆ ಮಾತನಾಡಿದ ಜಗದೀಶ್ ಗಂಗಣ್ಣನವರ್, ಹಿರಿಯ ಕಲಾವಿದರು, ಹೋರಾಟಗಾರರು ಆಗಿದ್ದ ಶಿವಪ್ರಸಾದ್ ಅವರ ಸೇವೆ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾಗಿದೆ. ಹಲವು ಪ್ರಶಸ್ತಿ ಇವರಿಗೆ ಲಭಿಸಿರುವುದು ಜಿಲ್ಲೆಗೆ ಗರಿಮೆ ತಂದಿವೆ. ಇವರು ಮುಂದಿನ ಪೀಳಿಗೆ ಮಾದರಿ ಆಗಿದ್ದಾರೆ ಎಂದು ಗುಣಗಾನ ಮಾಡಿದರು.

ಜಿ.ಎಲ್.ಮುದ್ದೇಗೌಡ ಮಾತನಾಡಿ, ಶಿವಪ್ರಸಾದ್ ಅವರನ್ನು ನಾನು ಹತ್ತಿರದಿಂದ ಬಲ್ಲೆ. ನನ್ನ ಬೆಳವಣಿಗೆಗೆ ಅವರ ತಂದೆ ಕಾರಣ, ಬಡವರ ಬಗ್ಗೆ ಕರುಣೆ ಇತ್ತು, ಐಶ್ವರ್ಯ ಕುಟುಂಬದಲ್ಲಿ ಹುಟ್ಟಿದರೂ, ಬಡವರ ಏಳಿಗೆಗೆ ಚಿಂತನೆ ಮಾಡುತ್ತಿದ್ದ ದೊಡ ವ್ಯಕ್ತಿ ಎಂದು ಭಾವುಕರಾದರು.

## ಅಭಿವೃದ್ಧಿ ಕಾಮಗಾರಿಗೆ ಸ್ವರೂಪ್ ಚಾಲನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ವಿವಿಧ ಬಡಾವಣೆಗಳಲ್ಲಿ ಇಂದು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಇಂದು ಭೂಮಿ ಪೂಜೆ ನೆರವೇರಿಸಿದರು.

ದೇವರಾಯಪಟ್ಟಣದ ಡಿಸಿ ಲೇಔಟ್‌ನಲ್ಲಿ 30 ಲಕ್ಷ ರೂ.ವೆಚ್ಚದಲ್ಲಿ ಸಿಎಂಐಡಿಪಿ ಅನುದಾನದ ಅಡಿಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ದೊಡ್ಡಮಂಡಿಗನಹಳ್ಳಿ ಬಳಿಯ ಗುಹೆ ಕಲ್ಲಮ್ಮ ದೇವಾಲಯದ ಬಳಿ 43 ಲಕ್ಷ ರೂ. ಮೊತ್ತದ ಸಿಎಂಐಡಿಪಿ ಯೋಜನೆ ಅನುದಾನದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ವಿಶೇಷ ಪೂಜೆ ಸಲ್ಲಿಸಿ ಅಡಿಗಲ್ಲು ಹಾಕಿದರು.

ಎರಡೂ ಕಡೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಹಾಗೂ ಗ್ರಾಮದ ಮುಖಂಡರು ಭೂಮಿ ಪೂಜೆ ವೇಳೆ ಶಾಸಕರ ಜೊತೆಗಿದ್ದರು.

ಮುಂದಿನ ದಿನಗಳಲ್ಲಿ ಈ ಭಾಗಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳಿಗೆ ತಮ್ಮ ಕಡೆಯಿಂದ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಶಾಸಕರು ಭರವಸೆ ನೀಡಿದರು. ಗುಣಮಟ್ಟದ ಕಾಮಗಾರಿ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಸೂಚಿಸಿದರು.

ನಾಟಿ ಕೋಳಿ ಮರಿ ವಿತರಣೆ: ನಂತರ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಹಾಸನ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ಮೈಸೂರು ವಿಭಾಗ ಇವರ ವತಿಯಿಂದ ಹಾಸನ ಗ್ರಾಮೀಣ ಭಾಗದ ರೈತ ಮಹಿಳೆಯರಿಗೆ ಉಚಿತವಾಗಿ ಕೊಡಮಾಡಿದ ನಾಟಿಕೋಳಿ ಮರಿಗಳನ್ನು ಸ್ವರೂಪ್ ವಿತರಿಸಿದರು.

ಹತ್ತಾರು ಫಲಾನುಭವಿಗಳಿಗೆ ಕೋಳಿ ಮರಿ ವಿತರಿಸಿ ಮಾತನಾಡಿದ ಶಾಸಕರು, ಕುಕ್ಕುಟೋದ್ಯಮ ಬಡ ಮಹಿಳೆಯರು ಹಾಗೂ ಬಡ ಕುಟುಂಬಗಳ ಆರ್ಥಿಕ ಶಕ್ತಿಗೆ ಸಹಾಯಕವಾಗಿದೆ. ಆದುದರಿಂದ ಅರ್ಹ ಫಲಾನುಭವಿಗಳು ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಈ ವೇಳೆ ಕುಕ್ಕುಟ ಮಹಾಮಂಡಳದ ಅಧ್ಯಕ್ಷ ಗ್ಯಾರಳ್ಳಿ ಹರೀಶ್ ಹಾಗೂ ಅಧಿಕಾರಿಗಳು ಇದ್ದರು.

## ಕಟ್ಟಿನಕೆರೆ ಮಾರುಕಟ್ಟೆ ಪಾರ್ಕಿಂಗ್ ಟೆಂಡರ್‌ನಲ್ಲಿ ಗೋಲ್ಮಾಲ್ ಆರೋಪ; ವ್ಯಾಪಾರಿಗಳ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಕಟ್ಟಿನಕೆರೆ ಮಾರುಕಟ್ಟೆಯ ಪಾರ್ಕಿಂಗ್ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಬುಧವಾರ ಪಾರ್ಕಿಂಗ್ ಸ್ಥಳದಲ್ಲೇ ಪ್ರತಿಭಟನೆ ನಡೆಸಿ, ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಿ ಮರು ಟೆಂಡರ್ ಕರೆಯುವಂತೆ ಒತ್ತಾಯಿಸಿದರು.

ಪಾರ್ಕಿಂಗ್ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಪಾರದರ್ಶಕತೆ ಪಾಲಿಸಲಾಗಿಲ್ಲ. ಟೆಂಡರ್ ಆಹ್ವಾನದ ಕುರಿತು ಸಾರ್ವಜನಿಕರಿಗೆ ಸಮರ್ಪಕವಾಗಿ ಮಾಹಿತಿ ನೀಡದೆ, ಸೀಮಿತ ವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಇದರಿಂದ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗೆ ಹೆಚ್ಚಿನ ಆದಾಯ ತರುವ ಅವಕಾಶ ಕೈತಪ್ಪಿದ್ದು, ಕಡಿಮೆ ಮೊತ್ತಕ್ಕೆ ಟೆಂಡರ್ ಅಂತಿಮಗೊಳಿಸಲಾಗಿದೆ ಎಂದು ಅವರು ದೂರಿದರು.

ಮಾರುಕಟ್ಟೆಯಂತಹ ಪ್ರಮುಖ ಸ್ಥಳದ ಪಾರ್ಕಿಂಗ್ ಟೆಂಡರ್ ಅನ್ನು ನಿಯಮಾನುಸಾರ, ಪಾರದರ್ಶಕವಾಗಿ ಹಾಗೂ ಎಲ್ಲರಿಗೂ ಸಮಾನ ಅವಕಾಶ ದೊರೆಯುವ ರೀತಿಯಲ್ಲಿ ನಡೆಸಬೇಕಿತ್ತು. ಆದರೆ ನಿಯಮಗಳನ್ನು ಉಲ್ಲಂಘಿಸಿ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿರುವ ಆರೋಪಿತ ಅಕ್ರಮದ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲದೆ ಪ್ರಸ್ತುತ ಟೆಂಡರ್‌ನ್ನು ರದ್ದುಪಡಿಸಿ, ವ್ಯಾಪಕ ಪ್ರಚಾರದೊಂದಿಗೆ ಮರು ಟೆಂಡರ್ ಕರೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಿಂದ ಕೆಲಕಾಲ ಮಾರುಕಟ್ಟೆ ಪ್ರದೇಶದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸ್ಥಳಕ್ಕೆ ಸಂಬಂಧಿಸಿದ ಅಧಿಕಾರಿಗಳು ಭೇಟಿ ನೀಡಿ ಪ್ರತಿಭಟನಾಕಾರರ ಮನವಿ ಸ್ವೀಕರಿಸಿದ್ದು, ಅವರ ಬೇಡಿಕೆಗಳನ್ನು ಪರಿಶೀಲಿಸುವ ಭರವಸೆ ನೀಡಿದ ಬಳಿಕ ಪ್ರತಿಭಟನೆ ಅಂತ್ಯಗೊಂಡಿತು.

## ಜು.06 ಮತ್ತು ಜು.07 ರಂದು ವಿಸ್ಮಯ ಕೀಟಗಳ ಮತ್ತು ಪಕ್ಷಿಗಳ ಛಾಯಚಿತ್ರ ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಮಂಡ್ಯ, ಕೃಷಿ ಮಹಾವಿದ್ಯಾಲಯ ಕಾರೆಕೆರೆ ಹಾಸನ, ಭಾರತೀಯ ರೆಡ್‌ಕ್ರಾಸ್ ಜಿಲ್ಲಾ ಶಾಖೆ ಹಾಸನ ಇವರ ಸಹಯೋಗದಲ್ಲಿ ಜು.06 ಮತ್ತು ಜು.07 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗು ಕೃಷಿ ಮಹಾವಿದ್ಯಾಲಯ ಕಾರೆಕೆರೆ ಹಾಸನಾಂಬ ಸಭಾಂಗಣದಲ್ಲಿ ವಿಸ್ಮಯ ಕೀಟಗಳ ಮತ್ತು ಪಕ್ಷಿಗಳ ಛಾಯಚಿತ್ರ ಪ್ರದರ್ಶನ ಹಾಗೂ ಬೇಕರಿ ಮತ್ತು ಜೈವಿಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಂಡ್ಯ ಕೃ.ವಿ.ವಿ.ವಿ ಫಾರಂ ಕುಲಪತಿಗಳಾದ ಡಾ|| ಕೆ.ಸಿ ನಾರಾಯಣಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ, ಜಿಲ್ಲಾ ಪಂಚಾಯತ್ ಕಾರ್ಯಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶುಭಂ ಶುಕ್ಲಾ ಅವರು ಗೌರವ ಉಪಸ್ಥಿತರಿರಲಿದ್ದು, ಕೃ.ಮ.ವಿ (ಕೃಷಿ) ಡೀನ್ ಡಾ|| ಕೆ.ಎಸ್.ಮುನಿಸ್ವಾಮಿಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿಗಳಾದ ಹೆಚ್.ಪಿ ಮೋಹನ್, ಜಿಲ್ಲಾ ಪಕ್ಷಿ ವೀಕ್ಷಕರ ಸಂಘದ ಅಧ್ಯಕ್ಷರಾದ ಬಿ.ಎಸ್ ದೇಸಾಯಿ, ತಿಪಟೂರು ಕೊನೆಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನ ಮತ್ತು ಮುಖ್ಯಸ್ಥರಾದ ಡಾ|| ಶಂಕರ್ ಎಂ.ಹೆಚ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಅಮಜಾದ್ ಖಾನ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಬಿ.ಆರ್ ಉದಯ್ ಕುಮಾರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ಮಲೆನಾಡಿಗೆ ಇನ್ನಷ್ಟು ಸಾರಿಗೆ ಬಸ್ ನೀಡಲು ಮಂಜು ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಸಕಲೇಶಪುರ: ಮಲೆನಾಡಿನ ಭೌಗೋಳಿಕ ವೈಶಿಷ್ಟ್ಯ ಹಾಗೂ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಪ್ರಯಾಣಿಕರ ಸಂಖ್ಯೆ ಗಮನ ದಲ್ಲಿಟ್ಟುಕೊಂಡು ಸ್ಥಳೀಯ ಕೆಎಸ್‌ಆರ್‌ಟಿಸಿ ಡಿಪೋಗೆ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಬಸ್‌ಗಳು ಮತ್ತು ಅಗತ್ಯ ಸಿಬ್ಬಂದಿಯನ್ನು ಮಂಜೂರು ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ರಾಜ್ಯದ ಮಲೆನಾಡು ತಾಲೂಕುಗಳಲ್ಲಿ ಸಕಲೇಶಪುರ ಒಂದಾಗಿದ್ದು, ವಿಶಾಲ ವ್ಯಾಪ್ತಿ ಹೊಂದಿದೆ. ಅನೇಕ ಗ್ರಾಮಗಳು ಅರಣ್ಯ ಪ್ರದೇಶದಲ್ಲಿರುವುದರಿಂದ ಹಾಗೂ ಆನೆ ಹಾವಳಿ ಹೆಚ್ಚಿರುವ ಕಾರಣ ಸಾರ್ವಜನಿಕರು ಸುರಕ್ಷಿತ ಸಂಚಾರಕ್ಕಾಗಿ ಕೆಎಸ್‌ಆರ್‌ಟಿಸಿ ಬಸ್ ಸೇವೆಯನ್ನೇ ಹೆಚ್ಚಾಗಿ ಅವಲಂಬಿಸಿದ್ದಾರೆ ಎಂದು ಹೇಳಿದರು.

ಹಿಂದೆ ಸಲ್ಲಿಸಿದ್ದ ಮನವಿಗೆ ಸ್ಪಂದಿಸಿ ಸಕಲೇಶಪುರ ಡಿಪೋಗೆ 2 ಹೊಸ ಬಸ್‌ಗಳನ್ನು ಮಂಜೂರು ಮಾಡಿರುವುದು ಸ್ವಾಗತಾರ್ಹ. ಆದರೆ, ಇಂದಿನ ಬೇಡಿಕೆಗೆ ಅದು ಸಾಕಾಗುವುದಿಲ್ಲ. ಹೆಚ್ಚುತ್ತಿರುವ ಪ್ರಯಾಣಿಕರ ಸಂಖ್ಯೆಯನ್ನು ಗಮನಿಸಿ ಇನ್ನಷ್ಟು ಹೊಸ ಬಸ್‌ಗಳನ್ನು ಮಂಜೂರು ಮಾಡುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಶಕ್ತಿ ಯೋಜನೆ ಜಾರಿಯಾದ ಬಳಿಕ ಮಹಿಳೆಯರು ಸೇರಿದಂತೆ ಸಾರ್ವಜನಿಕರ ಬಸ್ ಪ್ರಯಾಣದ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. ಇದರಿಂದ ಹಲವು ಮಾರ್ಗಗಳಲ್ಲಿ ಹೆಚ್ಚುವರಿ ಬಸ್‌ಗಳ ಅವಶ್ಯಕತೆ ಕಂಡುಬಂದಿದೆ. ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಬಸ್‌ಗಳನ್ನು ಒದಗಿಸಿದರೆ ಸಾರ್ವಜನಿಕರ ಸಂಚಾರ ಮತ್ತಷ್ಟು ಸುಗಮವಾಗಲಿದೆ ಎಂದು ಹೇಳಿದರು.

ಸಕಲೇಶಪುರ ಡಿಪೋದಲ್ಲಿ ಚಾಲಕರು, ನಿರ್ವಾಹಕರು ಹಾಗೂ ತಾಂತ್ರಿಕ ಸಿಬ್ಬಂದಿಯ ಕೊರತೆಯೂ ಇದೆ. ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿದರೆ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಇನ್ನಷ್ಟು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಹೊಸ ಸಾರಿಗೆ ಸಚಿವರು ಅಧಿಕಾರ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ ಅವರಿಗೆ ವಿಶೇಷ ಮನವಿ ಸಲ್ಲಿಸಲಾಗುವುದು. ಮಲೆನಾಡಿನ ಜನರ ಅಗತ್ಯಕ್ಕೆ ಆದ್ಯತೆ ನೀಡಿ ಸಕಲೇಶಪುರ ಡಿಪೋಗೆ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಬಸ್‌ಗಳು ಹಾಗೂ ಸಿಬ್ಬಂದಿಯನ್ನು ಮಂಜೂರು ಮಾಡುವ ಮೂಲಕ ಸಾರ್ವಜನಿಕರ ಸಾರಿಗೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಮಂಜು ಆಗ್ರಹಿಸಿದರು.

ಸಕಲೇಶಪುರ ಕೆಎಸ್‌ಆರ್‌ಟಿಸಿ ಘಟಕ ವ್ಯವಸ್ಥಾಪಕ ಸುಧೀರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಾಜ್ ಕುಮಾರ್, ತಾಲ್ಲೂಕು ಕಾರ್ಯದರ್ಶಿ ಅಗ್ನಿ ಸೋಮಶೇಖರ್, ಮುಖಂಡರಾದ ಷಣ್ಮುಖ, ಪ್ರಸನ್ನ ಕುಣಿಗಲ್ ಇದ್ದರು.

## ಡಾಕ್ಟರ್ಸ್ ಡೇ : ವೈದ್ಯರನ್ನು ಗೌರವಿಸಿದ ಸ್ಕಾಲರ್ಸ್ ವರ್ಲ್ಡ್ ಶಾಲಾ ವಿದ್ಯಾರ್ಥಿಗಳು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಅಂತರರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ನಗರದ ಸ್ಕಾಲರ್ಸ್ ವರ್ಲ್ಡ್ ಶಾಲೆಯ ವಿದ್ಯಾರ್ಥಿಗಳು ಸ್ಥಳೀಯ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರನ್ನು ಹೂಗುಚ್ಛ ನೀಡಿ ಗೌರವಿಸಿ, ಅವರ ಸೇವೆಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವೈದ್ಯರೊಂದಿಗೆ ಸಂವಾದ ನಡೆಸಿ, ಅವರ ಸೇವಾ ಮನೋಭಾವ, ವೃತ್ತಿಯ ಮಹತ್ವ ಹಾಗೂ ಸಮಾಜಕ್ಕೆ ನೀಡುತ್ತಿರುವ ಅಮೂಲ್ಯ ಕೊಡುಗೆಗಳ ಕುರಿತು ಮಾಹಿತಿ ಪಡೆದರು. ವೈದ್ಯರು ನಮ್ಮ ಸಮಾಜದ ಪ್ರತ್ಯಕ್ಷ ದೈವಗಳು ಎಂಬ ಸಂದೇಶವನ್ನು ಮಕ್ಕಳು ಹೃದಯಂಗಮ ಮಾಡಿಕೊಂಡಿದ್ದು, ಅವರ ಮುಖದಲ್ಲಿ ಉತ್ಸಾಹ ಮತ್ತು ಗೌರವದ ಭಾವನೆ ಮೂಡಿತ್ತು.

ವಿದ್ಯಾರ್ಥಿಗಳ ಶಿಸ್ತು, ಕೃತಜ್ಞತೆ ಹಾಗೂ ವೈದ್ಯರ ಬಗ್ಗೆ ಹೊಂದಿರುವ ಗೌರವವನ್ನು ಮೆಚ್ಚಿದ ದಂತ ವೈದ್ಯರಾದ ಡಾ. ಶೃತಿ ಹಾಗೂ ಡಾ. ಸೀಮಾ ಅವಿನಾಶ್, "ಮಕ್ಕಳ ಈ ಭೇಟಿ ನಮಗೆ ವಿಭಿನ್ನ ಅನುಭವ ನೀಡಿದೆ. ವೈದ್ಯರ ಸೇವೆಯ ಬಗ್ಗೆ ಮಕ್ಕಳಲ್ಲಿ ಇಂತಹ ಅಭಿಮಾನ ಮತ್ತು ಅರಿವು ಮೂಡುತ್ತಿರುವುದು ಸಂತಸದ ಸಂಗತಿ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಮೌಲ್ಯಾಧಾರಿತ ಶಿಕ್ಷಣ ಮತ್ತು ಸಾಮಾಜಿಕ ಜವಾಬ್ದಾರಿಯ ಮನೋಭಾವ ಬೆಳೆಸಲು ಸಹಕಾರಿಯಾಗುತ್ತವೆ" ಎಂದು ಅಭಿಪ್ರಾಯಪಟ್ಟರು.

ಶಾಲೆಯ ಆಡಳಿತಾಧಿಕಾರಿ ಡಾ. ಎಚ್.ಎನ್. ಚಂದ್ರಶೇಖರ್ ಮಾತನಾಡಿ, ಸಮಾಜದ ಸೇವೆಯಲ್ಲಿ ತೊಡಗಿರುವ ವೈದ್ಯರಿಗೆ ಗೌರವ ಸಲ್ಲಿಸುವ ಸಂಸ್ಕಾರವನ್ನು ಮಕ್ಕಳಲ್ಲಿ ಬೆಳೆಸುವುದು ಅತ್ಯಂತ ಮುಖ್ಯವಾಗಿದೆ. ಮಕ್ಕಳಲ್ಲಿ ದಯೆ, ಶ್ರದ್ಧೆ ಮತ್ತು ಸೇವಾ ಮನೋಭಾವ ಬೆಳೆಸುವುದರೊಂದಿಗೆ, ವೈದ್ಯರಂತೆ ಸಮಾಜಕ್ಕೆ ಕೊಡುಗೆ ನೀಡುವ ಸಂಕಲ್ಪವೂ ಮೂಡಬೇಕು ಎಂದು ಕರೆ ನೀಡಿದರು.

# ಜಿಲ್ಲೆಯಲ್ಲಿ ಪ್ರತಿ ತಿಂಗಳು 30-35 ಹೊಸ ಎಚ್‌ಐವಿ ಪ್ರಕರಣ ಪತ್ತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ದೇಶದಿಂದ ಎಚ್‌ಐವಿ/ಏಡ್ಸ್ ಸೋಂಕನ್ನು 2030ರೊಳಗೆ ನಿರ್ಮೂಲನೆ ಮಾಡುವ ರಾಷ್ಟ್ರೀಯ ಗುರಿ ಸಾಧನೆಗೆ ಕೇವಲ ಆರೋಗ್ಯ ಇಲಾಖೆಯೊಂದರ ಪ್ರಯತ್ನ ಸಾಕಾಗುವುದಿಲ್ಲ.

ಎಲ್ಲಾ ಇಲಾಖೆಗಳ ಸಮನ್ವಯದೊಂದಿಗೆ ಜನಜಾಗೃತಿ ಮೂಡಿಸಿ, ಸೋಂಕು ಪತ್ತೆ, ಚಿಕಿತ್ಸೆ ಹಾಗೂ ತಡೆಗಟ್ಟುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಕೆಸಾಪ್ಸ್ ಜಂಟಿ ನಿರ್ದೇಶಕಿ ಹಾಗೂ ರಾಜ್ಯಮಟ್ಟದ ಹಾಸನ ಜಿಲ್ಲಾ ನೋಡಲ್ ಅಧಿಕಾರಿ ಡಾ. ಚಂದ್ರಕಲಾ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮಗಳು, ಪಲ್ಸ್ ಪೋಲಿಯೊ ಅಭಿಯಾನ ಹಾಗೂ ಎಚ್‌ಐವಿ/ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಗಾಗಿ ಹಾಸನಕ್ಕೆ ಭೇಟಿ ನೀಡಿದ ಅವರು, ಡಿಎಚ್‌ಒ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು.




## ಯುವಜನರಲ್ಲೇ ಸೋಂಕು ಹೆಚ್ಚು – ಆತಂಕಕಾರಿ ಬೆಳವಣಿಗೆ:

ರಾಜ್ಯಾದ್ಯಂತ ಜಾರಿಯಲ್ಲಿರುವ 'ಏಡ್ಸ್ ಸುರಕ್ಷಾ ಅಭಿಯಾನ'ವನ್ನು ಹಾಸನ ಜಿಲ್ಲೆಯಲ್ಲೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಎಚ್‌ಐವಿ ಸೋಂಕು ನಡವಳಿಕೆ ಬದಲಾವಣೆಯಿಂದ ತಡೆಗಟ್ಟಬಹುದಾದ ಸೋಂಕಾಗಿದ್ದರೂ, ಇತ್ತೀಚಿನ ದಿನಗಳಲ್ಲಿ ಯುವಜನರಲ್ಲಿ ಸೋಂಕಿನ ಪ್ರಮಾಣ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಆದ್ದರಿಂದ ಯುವ ಸಮುದಾಯವನ್ನು ಗುರಿಯಾಗಿಸಿಕೊಂಡು ವ್ಯಾಪಕ ಜಾಗೃತಿ, ಆಪ್ತ ಸಮಾಲೋಚನೆ, ಪರೀಕ್ಷೆ ಹಾಗೂ ಚಿಕಿತ್ಸಾ ಸೇವೆಗಳನ್ನು ತಲುಪಿಸಬೇಕೆಂದು ಸೂಚಿಸಿದರು.

## ಏನಿದು 95-95-95 ಗುರಿ

ಸರ್ಕಾರ ನಿಗದಿಪಡಿಸಿರುವ 95-95-95 ಗುರಿ ಸಾಧನೆ ಅತ್ಯಂತ ಮಹತ್ವದ್ದಾಗಿದೆ.

ಶೇ.95ರಷ್ಟು ಜನರು ತಮ್ಮ ಎಚ್‌ಐವಿ ಸ್ಥಿತಿಯನ್ನು ತಿಳಿದುಕೊಳ್ಳಬೇಕು.

ಸೋಂಕು ದೃಢಪಟ್ಟವರಲ್ಲಿ ಶೇ.95ರಷ್ಟು ಜನರು ಚಿಕಿತ್ಸೆ ಪಡೆಯಬೇಕು.

ಚಿಕಿತ್ಸೆ ಪಡೆಯುವವರಲ್ಲಿ ಶೇ.95ರಷ್ಟು ಜನರಲ್ಲಿ ವೈರಲ್ ಲೋಡ್ ನಿಯಂತ್ರಣಕ್ಕೆ ಬರಬೇಕು.

ಈ ಗುರಿ ಸಾಧನೆಯ ಮೂಲಕ ಸೋಂಕಿನ ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಯಲು ಸಾಧ್ಯ ಎಂದು ಡಾ. ಚಂದ್ರಕಲಾ ವಿವರಿಸಿದರು. ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಪರೀಕ್ಷೆಗೆ ಒಳಗಾಗಲು 'ಬ್ರೇಕ್ ಫ್ರೀ' ಆಪ್ ಕುರಿತು ಗ್ರಾಮ ಮಟ್ಟದವರೆಗೆ ಪ್ರಚಾರ ಕೈಗೊಳ್ಳಬೇಕು ಎಂದರು. ಸಭೆಯಲ್ಲಿ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ. ವಿಜಯ್ ಗೊರೂರ್, ಜಿಲ್ಲಾ ಮೇಲ್ವಿಚಾರಕ ರವಿಕುಮಾರ್, ಆರೋಗ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

### ತಿಂಗಳಿಗೆ 30-35 ಹೊಸ ಪ್ರಕರಣ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಮಾತನಾಡಿ, "ಜಿಲ್ಲೆಯಲ್ಲಿ ಪ್ರತಿ ತಿಂಗಳು ಸುಮಾರು 30ರಿಂದ 35 ಹೊಸ ಎಚ್‌ಐವಿ ಸೋಂಕಿತರು ಪತ್ತೆಯಾಗುತ್ತಿದ್ದು, ಅವರಲ್ಲಿ ಹೆಚ್ಚಿನವರು ಯುವಜನರಾಗಿರುವುದು ಕಳವಳಕಾರಿ ಸಂಗತಿ. ಈ ಹಿನ್ನೆಲೆಯಲ್ಲಿ ಕಾಲೇಜುಗಳು, ವಿದ್ಯಾರ್ಥಿ ನಿಲಯಗಳು ಹಾಗೂ ಅಪಾಯದ ಗುಂಪುಗಳು ಹೆಚ್ಚಿರುವ ಪ್ರದೇಶಗಳಲ್ಲಿ ಜಾಗೃತಿ ಮತ್ತು ಉಚಿತ ಪರೀಕ್ಷಾ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ" ಎಂದು ಮಾಹಿತಿ ನೀಡಿದರು.

# ಮಾನವೀಯತೆ ಮೆರೆದ ಪೊಲೀಸ್ ಕಾನ್ಸ್‌ಟೇಬಲ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ರಸ್ತೆಯಲ್ಲಿ ಸಿಕ್ಕ ಚಿನ್ನದ ತಾಳಿ ಸರವನ್ನು ಪೊಲೀಸ್ ಕಾನ್ಸ್‌ಟೇಬಲ್ ರೂಪೇಶ್ ಎಂಬುವರು ವಾರಸುದಾರರಿಗೆ ಹಿಂದಿರುಗಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ತುರುವೇಕೆರೆಯಿಂದ ಮಾದೀಹಳ್ಳಿ ಗ್ರಾಮಕ್ಕೆ ಹೋಗಲು ಅಭಿಲಾಷ್ ಹಾಗೂ ಲಕ್ಷ್ಮೀ ದಂಪತಿ ಬಂದಿದ್ದರು.

ಹಣ್ಣು ಖರೀದಿಸುವಾಗ ನಾಲ್ಕು ಗ್ರಾಂ.ತೂಕದ ಚಿನ್ನದ ತಾಳಿ ತುಂಡಾಗಿ ಬಿದ್ದಿತ್ತು. ಮನೆಗೆ ಹೋಗಿ ನೋಡಿಕೊಂಡಾಗ ತಾಳಿ ಬಿದ್ದು ಹೋಗಿರುವುದು ತಿಳಿದಿತ್ತು. ನಂತರ ಹಣ್ಣು ಖರೀದಿ ಮಾಡಿದ್ದ ಸ್ಥಳಕ್ಕೆ ಬಂದು ಹುಡುಕಾಡಿದರೂ ಸಿಕ್ಕಿರಲಿಲ್ಲ.ಇದರಿಂದ ಮುಂದೇನು ಎಂದು ದಂಪತಿ ಬೇಸರಗೊಂಡಿದ್ದರು. ಆ ಚಿನ್ನದ ತಾಳಿ ಸರ ನಗರ ಪೊಲೀಸ್ ಠಾಣೆ ಕಾನ್ಸ್‌ಟೇಬಲ್ ರೂಪೇಶ್ ಅವರಿಗೆ ಸಿಕ್ಕಿತ್ತು.

ದಂಪತಿ ತಾಳಿ ಹುಡುಕುವ ವಿಷಯ ತಿಳಿದು ಠಾಣೆಗೆ ಬರುವಂತೆ ರೂಪೇಶ್ ತಿಳಿಸಿದ್ದರು. ನಂತರ ಸುಮಾರು 60 ಸಾವಿರ ಮೌಲ್ಯದ 4 ಗ್ರಾಂ ಚಿನ್ನದ ಸರವನ್ನು ದಂಪತಿಗೆ ಹಿಂದಿರುಗಿಸಿ ಕಾನ್ಸ್‌ಟೇಬಲ್ ರೂಪೇಶ್ ಮಾನವೀಯತೆ ಮೆರೆದಿದ್ದಾರೆ. ಚಿನ್ನದ ಸರ ವಾಪಸ್ ಸಿಕ್ಕಿದ್ದರಿಂದ ದಂಪತಿ ಸಂತಸ ವ್ಯಕ್ತಪಡಿಸಿ ಧನ್ಯವಾದ ಹೇಳಿದರು. ಈ ವೇಳೆ ಪಿಎಸ್ಐ ಅಭಿಜಿತ್ ಇದ್ದರು.

# 40 ವರ್ಷಗಳ ಸೇವೆಗೆ ಭಾವಪೂರ್ಣ ಬೀಳ್ಕೊಡುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ನಗರದ ಸಾಲಗಾಮೆ ರಸ್ತೆಯ ಸಹ್ಯಾದ್ರಿ ಸಿನಿಮಾ ಥಿಯೇಟರ್ ಸಮೀಪದ ಹಾಸನ ನ್ಯಾಷನಲ್ ಹೈಸ್ಕೂಲ್‌ನಲ್ಲಿ ಕಳೆದ ನಾಲ್ಕು ದಶಕಗಳಿಂದ ಬೋಧಕೇತರ ಸಿಬ್ಬಂದಿಯಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಶೌಕತ್ ಆಲಿಖಾನ್ ಅವರನ್ನು ಶಾಲಾ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಹಾಗೂ ಸ್ನೇಹಿತರು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

ಸರಳ ವ್ಯಕ್ತಿತ್ವ, ಕರ್ತವ್ಯನಿಷ್ಠೆ ಮತ್ತು ಮಾನವೀಯ ಮೌಲ್ಯಗಳಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದ ಶೌಕತ್ ಆಲಿಖಾನ್ ಅವರು, 1986ರಲ್ಲಿ ದಿ ಮಿಲ್ಲತ್ ಎಜುಕೇಶನ್ ಟ್ರಸ್ಟ್‌ನ ಹಾಸನ ನ್ಯಾಷನಲ್ ಹೈಸ್ಕೂಲ್‌ಗೆ ಬೋಧಕೇತರ ಸಿಬ್ಬಂದಿಯಾಗಿ ನೇಮಕಗೊಂಡಿದ್ದರು. ಅಂದಿನಿಂದ ನಿರಂತರವಾಗಿ 40 ವರ್ಷಗಳ ಕಾಲ ಒಂದೇ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ಇದೀಗ ಗೌರವಯುತವಾಗಿ ನಿವೃತ್ತಿ ಹೊಂದಿದ್ದಾರೆ.

ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಗಣ್ಯರು, ಶೌಕತ್ ಆಲಿಖಾನ್ ಅವರ ಪ್ರಾಮಾಣಿಕ ಸೇವೆ, ಸಮಯಪಾಲನೆ, ವಿನಯಶೀಲತೆ ಹಾಗೂ ವಿದ್ಯಾರ್ಥಿಗಳ ಮೇಲಿನ ಕಾಳಜಿಯನ್ನು ಸ್ಮರಿಸಿದರು. ನಾಲ್ಕು ದಶಕಗಳ ಕಾಲ ಯಾವುದೇ ಕಳಂಕವಿಲ್ಲದೆ ಸಲ್ಲಿಸಿದ ಅವರ ಸೇವೆ ಶಿಕ್ಷಣ ಕ್ಷೇತ್ರಕ್ಕೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶೌಕತ್ ಆಲಿಖಾನ್ ಅವರು ಬಾವುಕರಾಗಿ ತಮ್ಮ ನಾಲ್ಕು ದಶಕಗಳ ಸುದೀರ್ಘ ಪಯಣವನ್ನು ಮೆಲುಕು ಹಾಕಿದರು. ಇನ್ನು ಅನೇಕರನ್ನು ಇದೇ ವೇಳೆ ಕೃತಜ್ಞತೆಯಿಂದ ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಜನಾಬ್ ಸೈಯದ್ ಉಮರ್ ಫಾರುಕ್, ನಿವೃತ್ತ ಮುಖ್ಯೋಪಾಧ್ಯಾಯ ಜನಾಬ್ ನವೀದ್ ಹುಸೇನ್, ಶಾಲಾ ಮುಖ್ಯೋಪಾಧ್ಯಾಯ ಮೊಹಮ್ಮದ್ ಇಕ್ಬಾಲ್, ಕವಿ ಸೈಯದ್ ಶಹಬುದ್ದೀನ್, ಹೆಚ್.ಬಿ.ಎಸ್. ಹಾಲ್ ಮಾಲೀಕ ಸೈಯದ್ ಮುನವರ್, ವೈಭವ ಟೈಲರ್ಸ್ ಮಾಲೀಕ ವೆಂಕಟೇಶ್, ಹಿರಿಯ ಪತ್ರಕರ್ತ ಪಿ.ಎ. ಶ್ರೀನಿವಾಸ್ ಸೇರಿದಂತೆ ಅನೇಕ ಗಣ್ಯರು, ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶಿಕ್ಷಕಿ ರೂಪ ಅವರು ಶೌಕತ್ ಆಲಿಖಾನ್ ಅವರ ಜೀವನ ಪಯಣ ಹಾಗೂ ಸೇವಾ ಸಾಧನೆಯನ್ನು ಪರಿಚಯಿಸಿದರು.




### ಶೌಕತ್ ಆಲಿಖಾನ್ ಅವರ ಹಿನ್ನೆಲೆ ಹಾಗೂ ಸಮಾಜಮುಖಿ ಕಾರ್ಯಗಳು

ಕೌಟುಂಬಿಕ ಹಿನ್ನೆಲೆ: ಆಲೂರು ಮೂಲದ ಶೌಕತ್ ಆಲಿಖಾನ್ ಅವರ ತಂದೆ ಖಾಜಿ ಅಬ್ದುಲ್ ರಶೀದ್ ಖಾನ್ ಅವರು ಕೃಷಿಕರಾಗಿದ್ದು, ಆಲೂರಿನ ಮಸೀದಿಯಲ್ಲಿ ಧಾರ್ಮಿಕ ಗುರುಗಳಾಗಿಯೂ ಸೇವೆ ಸಲ್ಲಿಸಿದ್ದರು. ತಾಯಿ ನೂರ್ ಜಾನ್. ಸೋಮವಾರಪೇಟೆಯ ಸಭಾ ದಿಲ್ ಬಹಾರ್ ಅವರೊಂದಿಗೆ ದಾಂಪತ್ಯ ಜೀವನ ಆರಂಭಿಸಿರುವ ಇವರಿಗೆ ಮೂವರು ಮಕ್ಕಳಿದ್ದಾರೆ.

ಚುನಾವಣಾ ಆಯೋಗದಿಂದ ಪ್ರಶಂಸೆ: ಶಾಲೆಯ ಕರ್ತವ್ಯದ ಜೊತೆಗೆ ಸುಮಾರು 15 ವರ್ಷಗಳ ಕಾಲ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ಬಿ.ಎಲ್.ಒ. ಆಗಿ ಸೇವೆ ಸಲ್ಲಿಸಿದ್ದರು. ಇವರ ಅತ್ಯುತ್ತಮ ಸೇವೆಯನ್ನು ಗುರುತಿಸಿ ಹಾಸನ ಜಿಲ್ಲಾಡಳಿತವು ರಾಷ್ಟ್ರೀಯ ಮತದಾರರ ದಿನಾಚರಣೆಯಂದು ಪ್ರಶಂಸಾ ಪತ್ರ ನೀಡಿ ಗೌರವಿಸಿತ್ತು.

ವಿದ್ಯಾರ್ಥಿಗಳಿಗೆ ಪ್ರೋತ್ಸಾಹ: ಸಾಮಾಜಿಕ ಕಾಳಜಿ ಹೊಂದಿದ್ದ ಇವರು, ಹಲವು ವರ್ಷಗಳಿಂದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್‌ಬುಕ್, ಪೆನ್ ಹಾಗೂ ಪೆನ್ಸಿಲ್ ವಿತರಿಸುತ್ತಾ ಬಂದಿದ್ದಾರೆ. ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸುವ ಕಾರ್ಯವನ್ನೂ ನಡೆಸುತ್ತಿದ್ದಾರೆ.

# ಗೊಬ್ಬರ ಪೂರೈಸದಿದ್ದರೆ ಉಗ್ರ ಹೋರಾಟ

## ಗ್ಯಾರಂಟಿ ಯೋಜನೆಗಳಿಗೆ ಷರತ್ತು ವಿಧಿಸುವುದು ಸರಿಯಲ್ಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳ ಮೂಲ ಉದ್ದೇಶವನ್ನು ಮರೆತು, ಫಲಾನುಭವಿಗಳನ್ನು ವಿವಿಧ ಮಾನದಂಡಗಳ ಹೆಸರಿನಲ್ಲಿ 'ಫಿಲ್ಟರ್' ಮಾಡುವ ಮೂಲಕ ಬಡವರು ಹಾಗೂ ರೈತರನ್ನು ಯೋಜನೆಗಳಿಂದ ಹೊರಗಿಡುವ ಪ್ರಯತ್ನ ನಡೆಸುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಹಾಸನ ನಗರಕ್ಕೆ ಆಗಮಿಸಿದ್ದ ವೇಳೆ ಪ್ರವಾಸಿ ಮಂದಿರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸರ್ಕಾರದ ನೀತಿಗಳು ಮತ್ತು ಕೃಷಿ ವಲಯದ ಸಮಸ್ಯೆಗಳ ಕುರಿತು ವಾಗ್ದಾಳಿ ನಡೆಸಿದರು.

ಗ್ಯಾರಂಟಿ ಯೋಜನೆಗಳು ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಆಸರೆಯಾಗಬೇಕು. ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಶ್ರೀಮಂತರಿಗಾಗಿ ರೂಪಿಸಿಲ್ಲ. ಗ್ರಾಮೀಣ ಭಾಗದಲ್ಲಿರುವ ಬಹುತೇಕ ರೈತರು ಮತ್ತು ಕೃಷಿ ಕಾರ್ಮಿಕರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಇವರನ್ನು ದಾಖಲೆಗಳ ನೆಪದಲ್ಲಿ ಯೋಜನೆಗಳಿಂದ ಹೊರಗಿಡುವುದು ಸರಿಯಲ್ಲ. ಬಜೆಟ್ ಉಳಿಸುವ ಉದ್ದೇಶದಿಂದ ಅನಗತ್ಯ ನಿಯಮಗಳನ್ನು ಜಾರಿಗೆ ತಂದು ಫಲಾನುಭವಿಗಳನ್ನು ಕಡಿತಗೊಳಿಸುವುದು ಜನವಿರೋಧಿ ಕ್ರಮವಾಗಿದೆ. ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಹಾಗೂ ಮಾನವೀಯತೆ ಇರಬೇಕು ಎಂದು ಆಗ್ರಹಿಸಿದರು. ರಾಜ್ಯ ಸರ್ಕಾರ ಅಗತ್ಯ ಪ್ರಮಾಣದ ಗೊಬ್ಬರಕ್ಕಾಗಿ ಕೇಂದ್ರದ ಮೇಲೆ ಒತ್ತಡ ಹೇರಿ ಸಕಾಲದಲ್ಲಿ ಪೂರೈಕೆ ಮಾಡಬೇಕು.



### ರೈತರಿಗೆ ಕಿರುಕುಳ ನಿಲ್ಲಿಸಿ

ರಾಜ್ಯದಲ್ಲಿ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಸುರಿಯದಿರುವುದರಿಂದ ಹಲವು ಜಿಲ್ಲೆಗಳಲ್ಲಿ ಬರದ ವಾತಾವರಣ ಮುಂದುವರಿದಿದೆ. ಮಲೆನಾಡಿನ ಕೆಲವು ಭಾಗಗಳಲ್ಲಿ ಮಾತ್ರ ಉತ್ತಮ ಮಳೆಯಾಗುತ್ತಿರುವುದು ಆಶಾದಾಯಕ ಬೆಳವಣಿಗೆ. ಆದರೆ ರೈತರಿಗೆ ಕೃಷಿ ಪರಿಕರಗಳ ವಿತರಣೆಯಲ್ಲಿ ಅನಗತ್ಯ ನಿಯಮಗಳನ್ನು ಹೇರಲಾಗುತ್ತಿದೆ. ರಸಗೊಬ್ಬರ ಪಡೆಯಲು ಮತ್ತೊಂದು ವಸ್ತುವನ್ನು ಕಡ್ಡಾಯವಾಗಿ ಖರೀದಿಸಬೇಕು ಎಂಬ ಷರತ್ತುಗಳು ಹಾಗೂ ಲಿಂಕ್ ವ್ಯವಸ್ಥೆಗಳ ಮೂಲಕ ರೈತರಿಗೆ ಕಿರುಕುಳ ನೀಡಲಾಗುತ್ತಿದೆ. ಈ ಕೂಡಲೇ ಇದನ್ನು ನಿಲ್ಲಿಸಬೇಕು. ಜಿಲ್ಲಾಧಿಕಾರಿಗಳು ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಈ ಬಗ್ಗೆ ನಿಗಾ ವಹಿಸಬೇಕು ಎಂದು ಒತ್ತಾಯಿಸಿದರು.

### ಗೊಬ್ಬರ ಕೊರತೆಗೆ ಯುದ್ಧದ ನೆಪ ಬೇಡ

ದೇಶದಲ್ಲಿ ಉಂಟಾಗಿರುವ ರಸಗೊಬ್ಬರ ಕೊರತೆಗೆ ಅಂತರರಾಷ್ಟ್ರೀಯ ಯುದ್ಧಗಳನ್ನು ಕಾರಣವಾಗಿ ಹೇಳುವುದು ಸಮಂಜಸವಲ್ಲ. ಯುದ್ಧದ ನೆಪ ಹೇಳಿ ರೈತರನ್ನು ಸಂಕಷ್ಟಕ್ಕೆ ದೂಡುವ ಬದಲು, ಅಗತ್ಯವಿದ್ದರೆ ರಷ್ಯಾ, ಚೀನಾ ಸೇರಿದಂತೆ ಇತರ ದೇಶಗಳಿಂದ ಗೊಬ್ಬರವನ್ನು ಆಮದು ಮಾಡಿಕೊಂಡು ಕೊರತೆ ನೀಗಿಸುವ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲಿದೆ.

ಕೃಷಿ ಇಲಾಖೆಗೆ ಶೀಘ್ರ ಪೂರ್ಣಾವಧಿ ಸಚಿವರನ್ನು ನೇಮಕ ಮಾಡಬೇಕು. ಗೊಬ್ಬರ ಕೊರತೆ ಮುಂದುವರಿದರೆ ರಾಜ್ಯಾದ್ಯಂತ ರೈತ ಸಂಘದ ನೇತೃತ್ವದಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಇದೇ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು, ಪವಿತ್ರ, ವಿಠಲ, ಗಂಗಾಧರ್, ಅಕ್ಮಲ್ ಪಾಷಾ, ಕಾಂತರಾಜು, ಲಕ್ಷ್ಮಣ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಇತಿಹಾಸದಲ್ಲಿ ಈ ದಿನ

## ಜುಲೈ-02

1690: ಐರ್ಲೆಂಡ್‌ನ ಓಲ್ಡ್‌ಬ್ರಿಡ್ಜ್‌ನಲ್ಲಿ ನಡೆದ ಬೊಯ್ನ್ ಕದನದಲ್ಲಿ ಇಂಗ್ಲೆಂಡ್‌ನ ಪ್ರೊಟೆಸ್ಟಂಟ್ ರಾಜ ವಿಲಿಯಂ ರ ಸೈನ್ಯವು ಪದಚ್ಯುತ ರೋಮನ್ ಕ್ಯಾಥೋಲಿಕ್ ರಾಜ ಜೇಮ್ಸ್‌ರನ್ನು ಸೋಲಿಸಿತು.

1858 ರಲ್ಲಿ ಲಿನ್ನಿಯನ್ ಸೊಸೈಟಿಗೆ ಚಾರ್ಲ್ಸ್ ಡಾರ್ವಿನ್ ಮತ್ತು ಆಲ್ಫ್ರೆಡ್ ರಸೆಲ್ ವ್ಯಾಲೇಸ್ ಅವರ ವಿಕಾಸದ ಕುರಿತಾದ ಪ್ರಬಂಧಗಳನ್ನು ಜಂಟಿಯಾಗಿ ಓದಿದಾಗ ಪ್ರೇಕ್ಷಕರು ಬೆರಗುಗೊಂಡು ಮೌನವಾದರು

1863 ರಲ್ಲಿ ಕರಿಯರ್ ಮತ್ತು ಐವ್ಸ್ ಪ್ರಕಟಿಸಿದ ಗೆಟ್ಟಿಸ್‌ಬರ್ಗ್ ಕದನದ ಶಿಲಾಮುದ್ರಿಕೆ.ಗುಲಾಮಗಿರಿ ವಿಭಜನೆಯು ಅಮೆರಿಕದ ಅಂತರ್ಯುದ್ಧವನ್ನು ಪ್ರಚೋದಿಸುತ್ತದೆ

1863 - ಪೆನ್ಸಿಲ್ವೇನಿಯಾದಲ್ಲಿ ಗೆಟ್ಟಿಸ್‌ಬರ್ಗ್ ಕದನ ಪ್ರಾರಂಭವಾಯಿತು, ಒಕ್ಕೂಟ ಪಡೆಗಳು ಉತ್ತರ ವರ್ಜೀನಿಯಾದ ಕಾನ್ಫೆಡರೇಟ್ ಜನರಲ್ ರಾಬರ್ಟ್ ಇ. ಲೀ ಅವರ ಸೈನ್ಯವನ್ನು ತಡೆದವು.

1867: ನ್ಯೂ ಬ್ರನ್ಸ್‌ವಿಕ್, ನೋವಾ ಸ್ಕಾಟಿಯಾ, ಒಂಟಾರಿಯೊ ಮತ್ತು ಕ್ವಿಬೆಕ್ ಪ್ರಾಂತ್ಯಗಳನ್ನು ಒಳಗೊಂಡ ಕೆನಡಾದ ಡೊಮಿನಿಯನ್ ರಚನೆಯಾಯಿತು, ಜಾನ್ ಎ. ಮ್ಯಾಕ್‌ಡೊನಾಲ್ಡ್ ಮೊದಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು.

1916: ಮೊದಲನೆಯ ಮಹಾಯುದ್ಧದಲ್ಲಿ ಸೋಮ್ ಕದನದ ಮೊದಲ ದಿನ : ಬ್ರಿಟಿಷ್ ಸೈನ್ಯವು ತನ್ನ ಅತ್ಯಂತ ಕೆಟ್ಟ ದಿನವನ್ನು ಅನುಭವಿಸಿತು , 19,240 ಜನರನ್ನು ಕಳೆದುಕೊಂಡಿತು.

1997 - ಯುನೈಟೆಡ್ ಕಿಂಗ್‌ಡಮ್ ಹಾಂಗ್ ಕಾಂಗ್ ಮತ್ತು ಹೊಸ ಪ್ರದೇಶಗಳನ್ನು ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾಕ್ಕೆ ಹಿಂದಿರುಗಿಸಿತು.

1941: ಬ್ರೂಕ್ಲಿನ್ ಡಾಡ್ಜರ್ಸ್-ಫಿಲಡೆಲ್ಫಿಯಾ ಫಿಲ್ಲಿಸ್ ಬೇಸ್‌ಬಾಲ್ ಆಟದ ಪ್ರಸಾರದ ಸಮಯದಲ್ಲಿ ಪ್ರಸಾರವಾದ ಮೊದಲ ದೂರದರ್ಶನ ಜಾಹೀರಾತಿಗಾಗಿ ಬುಲೋವಾ ವಾಚ್ ಕಂಪನಿ $9 ಪಾವತಿಸಿತು.

# ಎನ್ನ ಭಂಜಿ!!-2

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-7**

ಇತ್ತ ಪಾರಿ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಕರೆದುಕೊಂಡು ಅಜ್ಜೀಗುಡ್ಡೆ ದಾರಿಯಲ್ಲಿ ಲೋಕವಳ್ಳಿ ದಾಟಿ, ಮೇದರ ಮನೆಯ ಏರಿ ಹತ್ತಿ ಮೂಡಿಗೆರೆ ಪ್ಯಾಟೆಗೆ ಹೋದರೆ, ಬಣ್ಣದ ಟೇಪು, ಕಡ್ಲೆಪುರಿ, ಬೂತಾಯಿ ಮೀನು ತಗೊಂಡು ದಾಸಪ್ಪನ ಸೇಂದಿ ಅಂಗಡಿಯಲ್ಲಿ ಒಂದು ಬಾಟಲಿ ಏರಿಸಿಕೊಂಡು, ಬೇಯಿಸಿದ ಮೊಟ್ಟೆಗಳನ್ನು ಮಗಳ್ದಿರಿಗೆ ಕೊಡಿಸಿ ಕೆಂಪೇರಿ ವಾಪಾಸ್ ಬಿದರಹಳ್ಳಿ ಕಡೆ ನಡೆಯುತ್ತಿದ್ದರೆ, ಕೆಳ್ಳಸ್ವಾಪಿನ ಗ್ಯಾರೇಜಿನ ಮೆಕ್ಯಾನಿಕ್‌ಗಳು, ಮೀನು ಮಾರುವ ಹುಡುಗರು ಸಹಾ ತಾಯಿ-ಮಕ್ಕಳನ್ನು ನೋಡಿ ಇವರನ್ನು ಅಕ್ಕ ತಂಗಿಯರೆಂದೇ ತಿಳಿದು ''ಇವರು ಯಾರೋ ಲೋಕಲ್ ಪ್ಲಾಂಟರ್ರಿಗೇ ಹುಟ್ಟಿರಬೇಕು ಮಾರಾಯ'' ಎಂದು ಏನೇನನ್ನೋ ದ್ವಂದಾರ್ಥದಲ್ಲಿ ಮಾತನಾಡಿ ಕಿಸಕ್ ಎಂದು ಹಲ್ಲುಕಿರಿಯುತ್ತಿದ್ದರು. ಈಗ ಕಾಫಿ ಕೊಯ್ಲು ಮುಗಿದು ಧೂಳಗತೆ ಪ್ರಾರಂಭವಾಗಿತ್ತು. ದಿನಕ್ಕೆ ಇಷ್ಟು ಗಿಡ ಅಗತೆ ಕಡಿಯುವುದೆಂದು ನಿಗದಿಯಾಗಿದ್ದರಿಂದ ಆ ಉರಿಬಿಸಿಲಿನಲ್ಲಿ ಅಗತೆ ಕಡಿಯುವುದು ಕಷ್ಟವೆಂದು, ಬಸ್ರಾಜ ತನ್ನ ಮಗನೊಂದಿಗೆ ಬೆಳಗ್ಗೆ ಏಳರಿಂದ ಹತ್ತು ಗಂಟೆಯವರೆಗೆ ಅಗತೆ ಕಡಿದು ಲೈನಿಗೆ ವಾಪಾಸ್ ಬರತೊಡಗಿದ. ನಂತರ ಸಂಜೆ ನಾಲ್ಕರ ನಂತರ ಆರು ಗಂಟೆಯವರೆಗೆ ಮತ್ತೆ ಅಗತೆ ಕಡಿದು ಆ ದಿನದ ಕೋಟಾ ಮುಗಿಸುತ್ತಿದ್ದ. ಕಾಫಿ ಕುಯ್ಯುವಾಗ ಉದುರಿ ನೆಲಕ್ಕೆ ಬಿದ್ದಿದ್ದ ಕಾಫಿ ಬೀಜಗಳನ್ನು ಹೆರಕಲು ಪಾರಿ ತನ್ನ ಹೆಣ್ಣುಮಕ್ಕಳ ಜೊತೆ ತೋಟದ ಇನ್ನೊಂದೆಡೆಗೆ ಹೋಗುತ್ತಿದ್ದಳು.

ಮಧ್ಯಾಹ್ನ ಎರಡು ಗಂಟೆಗೆ ಊಟ ಮುಗಿಸಿಕೊಂಡ ಬಸ್ರಾಜ ಆ ದಿನ ಜಾರಪ್ಪ ಪೂಜಾರಿಯ ಮನೆಗೆ ಸಾರಾಯಿ ಕುಡಿಯಲು ಹೋಗಿದ್ದ. ಜಾರಪ್ಪನ ಮನೆಯ ಸುತ್ತ ನಿಂತಿದ್ದ ಖಾಕಿ ಬಟ್ಟೆಯವರನ್ನು ನೋಡಿ ಬಸ್ರಾಜ ಅವಾಕ್ಕಾದ. ಮನೆಯೊಳಗಿನಿಂದ ಹೆಂಗಸಿನದೊಂದು ಅಬ್ಬರಿಸಿದ್ದಂತ 'ಅಯ್ಯೋ ಅಯ್ಯಯ್ಯೋ' ಎಂಬ ಧ್ವನಿ ಕೇಳಿ ಕಂಗಾಲಾಗಿಹೋದ. ನಿಂತಿದ್ದ ನಾಲ್ಕು ಜೀಪುಗಳಲ್ಲಿ ಮೂರು ಎಕ್ಸೈಜಿನವರದು ಮತ್ತೊಂದು ಪೋಲಿಸ್‌ರದು.

ಅಬಕಾರಿ ಜೀಪಿನ ಹಿಂದೆ ಕ್ಯಾನುಗಳು, ಪ್ಲಾಸ್ಟಿಕ್ ಕೊಡಗಳು, ತಾಮ್ರದ ಪಾತ್ರೆಗಳು, ಅಲ್ಯೂಮಿನಿಯಂ ಹಂಡೆಗಳು ದುರ್ವಾಸನೆ ಬೀರುತ್ತಾ ಹಗ್ಗದಲ್ಲಿ ಕಟ್ಟಿಸಿಕೊಂಡು ನೇತಾಡುತ್ತಿದ್ದವು. ಆ ಕಾಡಿನ ವಾತಾವರಣ, ಪೋಲೀಸರ ಅಸ್ತಿತ್ವ, ಹೆಂಗಸಿನ ಆರ್ತನಾದ ಬಸ್ರಾಜನಿಗೆ ಭೀಬತ್ಸ ಸನ್ನಿವೇಶವನ್ನೇ ಸೃಷ್ಟಿಸಿ ಓಡುವಂತೆ ಪ್ರೇರಣೆ ನೀಡಿದವು. ಆದರೆ ಕಾಲುಗಳು ನಿಂತಲ್ಲಿಂದ ಮೇಲಕ್ಕೇಳುತ್ತಿಲ್ಲ. ನಾನೆಲ್ಲಾದರೂ ಓಡಿದರೆ ಜಾರಪ್ಪನನ್ನು ನಾನೇ ಕೊಲೆ ಮಾಡಿರುವುದೆಂದು ಖಚಿತವಾಗುತ್ತದೆ. ಅಯ್ಯೋ ದೇವರೇ ನಾನ್ಯಾಕಾದರೂ ಇಲ್ಲಿಗೆ ಬಂದೆನೋ ಎಂದು ತನ್ನನ್ನೇ ತಾನು ಹಳಿದುಕೊಳ್ಳಲಾರಂಭಿಸಿದ.

'ಯಾವನೋ ನೀನು? ಎಂತಕ್ಕಲ ಬಂದೆ?' ಎಂದು ಸಿಡಿಲಿನ ಧ್ವನಿಯೊಂದು ಬೆನ್ನ ಹಿಂದಿನಿಂದ ಅಪ್ಪಳಿಸಿತು. ತಿರುಗಿ ನೋಡುತ್ತಾನೆ ಯಮಕಿಂಕರನ ಗೆಟಪ್ಪಿನಲ್ಲಿದ್ದ ಅಜಾನುಬಾಹು ಗಿರಿಜಾಮೀಸೆಧಾರಿ ಪೋಲೀಸ್ ಎಸ್.ಐ. ಬೆಲ್ಲದ್‌ನಾಯ್ಕ ನಿಂತಲ್ಲಿಂದಲೇ ತಿನ್ನುವಂತೆ ಬಸ್ರಾಜನನ್ನು ನೋಡತೊಡಗಿದರು. ಆಗ ತಾನೇ ರಾಗಿ ಅಂಬಲಿ ಕುಡಿದು ಬಂದಿದ್ದ ಬಸ್ರಾಜನಿಗೆ ಕುಡಿದ ಅಂಬಲಿ ಯಾಕೋ ಹಾಗೇ ದೇಹದಿಂದ ಹೊರಹೋಗುವುದೇನೋ ಎಂದೆನಿಸಿ ಕಾಲುಗಳನ್ನು ಆದಷ್ಟೂ ಹತ್ತಿರಕ್ಕೆ ಸೇರಿಸಿಕೊಂಡು ಮೂಲಬಂಧ ಮಾಡಿಕೊಂಡು ಥರಗುಟ್ಟತೊಡಗಿದ.

'ಜಾರಪ್ಪನ ಸಾರಾಯಿ ಕುಡಿಯಲಿಕ್ಕೆ ಬಂದಿದ್ದೀಯಾ? ಬೋಳಿಮಗನೇ, ನಡೀ ಕುಡಿಯಂತೆ, ನಡೀ ಒಳಗೆ, ಒಂದೆ ಹೊಡೆತಕ್ಕೆ ಹೇಗೆ ಸತ್ತು ಬಿದ್ದಿದ್ದಾನೆ ನೋಡು ನಡೀ' ಎನ್ನುತ್ತಾ ಕುತ್ತಿಗೆ ಹಿಡಿದುಕೊಂಡು ದಬ್ಬಿಕೊಂಡೇ ಬೈನೇ ತಟ್ಟಿಯಿಂದ ಗೋಡೆಯಂತೆ ಬೇಲಿ ಕಟ್ಟಿ ಮಾಡಿದ್ದ ಹುಲ್ಲುಹೊದಿಕೆಯ ಮನೆಯೊಳಗೆ ಬಸ್ರಾಜನ ತಲೆತೂರಿಸಿ ಕುಂಡೆಯ ಮೇಲೆ ಬೂಟಿರಿಸಿ ಬಿಸಿನೀರೊಲೆಗೆ ದೊಡ್ಡ ಸೌದೆ ಕೊರಡನ್ನು ತೂರಿಸುವಂತೆ ಮನೆಯೊಳಗೆ ನೂಕಲಾಯಿತು.

ಒಳಗಿನ ದೃಶ್ಯ ಕಂಡು ಬಸ್ರಾಜನ ಎದೆಯೇ ಒಡೆದಂತಾಯಿತು. ಸಂಜೀವ, ಜಬ್ಬ, ಡಿ.ಸಿ. ಸುಬ್ಬ ಮೂರೂ ಜನ ಬರೀ ಚಡ್ಡಿಯಲ್ಲಿ ಕುಳಿತಿದ್ದರು. ಈಗಾಗಲೇ ಅವರಿಗೆ ಸಮ್ಮಾ ಹೊಡೆತ ಬಿದ್ದಿದ್ದಕ್ಕೆ ಪುರಾವೆ ಇತ್ತು. ಸಾರಾಯಿ ಕುಡಿಯಲು ಬಂದವರು, ಈಗ ಎಕ್ಸೈಜ್ ಮತ್ತು ಪೋಲೀಸರ ಅತಿಥಿಗಳಾಗಿದ್ದರು. ಜಾರಪ್ಪ ನೆಲದ ಮೇಲೆ ಸತ್ತವನಂತೆ ಅಂಗಾತ ಬಿದ್ದುಕೊಂಡಿದ್ದ. ಒಲೆಯಲ್ಲಿ ಬೆಂಕಿ ಧಗಧಗನೇ ಉರಿಯುತ್ತಿತ್ತು. ಒಲೆಯ ಮೇಲೆ ಕಡುಬು ಬೇಯಿಸುವ ದೊಡ್ಡ ಪಾತ್ರೆ ಇಡಲಾಗಿತ್ತು. ಅದರ ಮುಚ್ಚಳವನ್ನು ಮಾತ್ರ ಉಲ್ಟಾ ಮುಚ್ಚಲಾಗಿತ್ತು. ಆ ಮುಚ್ಚಳದಲ್ಲಿ ನೀರನ್ನು ತುಂಬಿಸಿ, ಮುಚ್ಚಳವು ಪಾತ್ರೆಯನ್ನು ಸೇರುವ ಜಾಗದಲ್ಲಿ ಹಬೆ ಹೊರಹೋಗದಂತೆ ಹುತ್ತದ ಮಣ್ಣನ್ನು ನೀರಿನಲ್ಲಿ ಕಲೆಸಿ ಅದರಲ್ಲಿ ಬಟ್ಟೆಯನ್ನು ನೆನೆಸಿ ಸುತ್ತಲಾಗಿತ್ತು. ನಾಲ್ಕಾರು ಕೊಡಗಳು ಬಕ್ಕಬಾರಲಾಗಿ ಬಿದ್ದಿದ್ದವು. ಕೊಡದ ನೀರೆಲ್ಲಾ ಸಗಣಿ ಸಾರಿಸಿದ ನೆಲದ ಮೇಲೆ ಚೆಲ್ಲಾಡಿ, ಜಾರಪ್ಪ ನಿಜವಾಗಿ ಉಚ್ಚೆ ಹೋಯ್ದುಕೊಂಡಿದ್ದಾನೋ ಅಥವಾ ಅವನು ಬಿದ್ದಲ್ಲೇ ಚೆಲ್ಲಾಡಿದ್ದನೀರಿನಲ್ಲಿ ನೆನೆದುಹೋಗಿದ್ದಾನೋ ಎಂದು ಗೊಂದಲವಾಗುವಂತಿತ್ತು. ಚೆಲ್ಲಾಡಿದ ನೀರು ಒಲೆಯೊಳಗೆ ಹರಿಯುತ್ತಾ ಚುಸ್ ಚೂಂಯ್ ಬುಸ್ ಸದ್ದು ಮಾಡುತ್ತಿತ್ತು.



ಇತ್ತ ಜಾರಪ್ಪನ ಹೆಂಗಸು ಮಂಚವೆಂಬ ಮಂಚದ ಮೇಲೆ ಮಲಗಿ ಅಪಾರ ಹೊಟ್ಟೆನೋವಿನಿಂದ ಉರುಳಾಡುತ್ತಿದ್ದಳು. ಅವಳು ಹಾತರಿಸುವ ಅಬ್ಬರಕ್ಕೆ ಸುತ್ತಮುತ್ತಲಿನ ಕಾರ್ಮಿಕರ ಮನೆಯ ಸ್ಕೂಲಿಗೆ ಹೋಗದ ಮಕ್ಕಳು, ಕೆಲಸಕ್ಕೆ ಹೋಗದ ಮುದುಕ-ಮುದುಕಿಯರು ಪೋಲೀಸರಿದ್ದುದರಿಂದ ಹೆದರಿ ಮನೆಯೊಳಗಿನ ತಡಿಕೆ ಹಿಂದಿನಿಂದ, ಬೇಲಿಸಂದಿಯಿಂದಲೇ ಇಣುಕಿ ನೋಡಿ, 'ಅಂಚಿನ ಇಂಚಿನ' ಎಂದು ತುಳುವಿನಲ್ಲೇ ಪಿಸುಮಾತಿನಲ್ಲಿ ಗುಸುಗುಡತೊಡಗಿದರು. ಸಾರಾಯಿ ಮಾರಿ, ಮಾರಿಯೇ ಒಳ್ಳೆ ದುಡ್ಡು ಮಾಡಿಕೊಂಡಿದ್ದ ಜಾರಪ್ಪನ ಮೇಲೆ ಅಸೂಯೆಪಡುತ್ತಿದ್ದ ನೆರೆಹೊರೆಯವರು ಒಳಗೊಳಗೇ ಈ ನನ್ ಮಗ್ನಿಗೆ ಹಂಗೇ ಆಗಬೇಕು ಎಂದು ಖುಷಿಪಡುತ್ತಿದ್ದರು. ಜಾರಪ್ಪನ ಮನೆಯ ನಾಯಿಗಳು ಸೀಮೆಸೀಗೆ ಲಂಟಾನದೊಳಗೆ ಅಡಗಿ ನಿಂತು ಪುರುಸೊತ್ತಿಲ್ಲದಂತೆ ಬೊಗಳತೊಡಗಿದವು. ಈ ಗಲಾಟೆಯಿಂದ ಸುತ್ತಮುತ್ತಲ ಮನೆಯ ನಾಟಿಕೋಳಿಗಳು ಸ್ಪರ್ಧೆಗೆ ಬಿದ್ದವರಂತೆ ಅಖಂಡವಾಗಿ ಕ್ಯಾಕರಿಸುತ್ತಾ ಅಂತೂ ಒಂದು ದೊಡ್ಡ ಗಲಭೆಯನ್ನೇ ಏಳಿಸಿ ಪೋಲೀಸರಿಗೂ, ಎಕ್ಸೈಸಿನವರಿಗೂ ಯಾಕಪ್ಪಾ ಇಲ್ಲಿಗೆ ಬಂದೆವು ಎನ್ನಿಸುವಂತೆ ಮಾಡಿದ್ದವು. ಜೀವ ಹೋಗುವಂತೆ ಬೊಬ್ಬಿರಿಯುತ್ತಿದ್ದ ಜಾರಪ್ಪನ ಹೆಂಗಸು ಜಪ್ಪಯ್ಯಾ ಎಂದರೂ ಮಂಚ ಬಿಟ್ಟು ಏಳುತ್ತಿರಲಿಲ್ಲ.

ಎರಡೂ ಕಾಲುಗಳನ್ನು ಮಂಡಿಯ ಬಳಿ ಮೇಲೆ ಮಾಡಿಕೊಂಡು ಕೈಗಳಿಂದ ಮಂಡಿಯನ್ನು ತಬ್ಬಿ ಹಿಡಿದು ತುಳುವಿನಲ್ಲಿ ಆಲಾಪನೆ ನಡೆಸುತ್ತಿದ್ದಳು. ಮಧ್ಯೆ ಮಧ್ಯೆ ಪೋಲೀಸರಿಗೂ ಅರ್ಥವಾಗಲೆಂದು ಕನ್ನಡದಲ್ಲಿಯೂ ತನ್ನ ಆಲಾಪನೆಗೆ ವಿವರಣೆಯನ್ನು ನೀಡಿ ಅಗತ್ಯವಿದ್ದ ತರ್ಜುಮೆ ಕಾರ್ಯವನ್ನು ತಾನೇ ನಿರ್ವಹಿಸುತ್ತಾ ದ್ವಿಭಾಷಾ ಪ್ರಲಾಪವನ್ನು ಮುಂದುವರೆಸುತ್ತಿದ್ದಳು.

'ನನ್ನ ಗಂಡನ್ನ ಕೊಂದಾಕಿದ್ರಲ್ಲೋ ರಾಕ್ಷಸ್ರಾ, ನಿಮ್ಮ ಹೆಂಡ್ರು ಮುಂಡೇರಾಗ್ಲಿ, ನಾನು ಹೊಟ್ಟೆ ನೋವಿನಿಂದ ಮಲಗದೇ ಇದ್ದಿದ್ರೆ ನಿಮ್ಮನ್ನೆಲ್ಲ ಇವತ್ತು ಪಂಜುರ್ಲಿ ಭೂತಕ್ಕೆ ಬಲಿ ಕೊಡ್ತಿದ್ದೆ, ನಾಯಿದ ಮಗೆ' ಎಂದು ಏನೇನೋ ಬಾಯಿಮಾಡುತ್ತ ಇದ್ದಳು. ಇವಳ ಕೂಗಾಟಕ್ಕೆ ರೋಸಿ ಹೋದ ಎಕ್ಸೈಸಿನವನೊಬ್ಬ 'ಎಲ್ಲಿ ನಿನ್ನ ಭೂತ? ತೋರಿಸು ನನಗೂ' ಎಂದವನೆ ಅವಳನ್ನು ರಟ್ಟೆ ಹಿಡಿದು ಮಂಚದಿಂದ ಕೆಳಗೆಳೆದ.

ಆಗ ಮಾರಾಟ ಮಾಡಲು ಅಡಗಿಸಿಟ್ಟುಕೊಂಡಿದ್ದ ಷರಾಬಿನ ಕರೀ ಕ್ಯಾನೊಂದು ಅವಳ ಸೀರೆಯೊಳಗಿಂದ ಬಡಲ್! ಎಂದು ನೆಲಕ್ಕೆ ಬಿದ್ದು, ಅವಳ ಹೊಟ್ಟೆ ನೋವಿನ ಕಾರಣ ತಿಳಿಸಿತು.

ಕ್ಯಾನ್ ಕೆಳಗೆ ಬಿದ್ದ ಕೂಡಲೇ ಅಲ್ಲೇ ಕೂತಿದ್ದ ಡಿ.ಸಿ. ಸುಬ್ಬ 'ಅಯ್ಯಯ್ಯೋ ಚೆಲ್ಲಿಹೋಗುತ್ತೆ' ಎಂದವನೇ ಕ್ಯಾನನ್ನು ನೆಟ್ಟಗೆ ಎತ್ತಿ ನಿಲ್ಲಿಸಿ ಗೋಡೆ ಬದಿಗೆ ಒರಗಿಸಿ ಇಟ್ಟು ಮತ್ತೆ ಮೂಲೆ ಬದಿಯಲ್ಲಿ ಕುಕ್ಕರನೆ ಕೂತ.

ಜಾರಪ್ಪನ ಹೆಂಗಸು ಗುಟ್ಟು ಬಯಲಾದರೂ, ಇನ್ನೂ ವರ್ಕ್‌ಔಟ್ ಆಗುತ್ತದೋ ನೋಡೋಣ ಎಂದು 'ಎನ್ನ ಭಂಜಿ' ಎಂದು ನೆಲದ ಮೇಲೆ ಚೆಲ್ಲಿದ್ದ ನೀರ ಮೇಲೇ ಹೊರಳಾಡತೊಡಗಿ ಕಡೆಗೆ ಗಂಡನ ಎದೆಯ ಮೇಲೆ ತಲೆಯಿಟ್ಟು ಬೋರಾಡತೊಡಗಿದಳು. ಈ ಗಂಡ-ಹೆಂಡಿರ ನಾಟಕ ಮುಗಿಯುವ ಸೂಚನೆ ಕಾಣದೇ ಕಿರಿಕಿರಿಗೊಳಗಾದ ಎಕ್ಸೈಸಿನವನೊಬ್ಬ ಅಲ್ಲೇ ಬೇಲಿ ಮೇಲೆ ಕೂತು ತನ್ನ ಕತ್ತನ್ನು ಹಿಂದೆ ಮುಂದೆ ಆಡಿಸುತ್ತಾ ಈ ಕಳ್ಳಭಟ್ಟಿ ಗದ್ದಲವನ್ನು ಅವಲೋಕಿಸುತಿದ್ದ ಮುಳ್ಳು ಮುಳ್ಳು ಕರಿಬೆನ್ನಿನ ಕೇಸರಿ ತಲೆಯ ಓತಿಕ್ಯಾತವನ್ನು ಹಿಡಿದುಕೊಂಡು ಬಂದು ಜಾರಪ್ಪನಿಗೆ 'ಕಳ್ಳನನ್ಮಗನೇ ಈಗ ಎದ್ದೇಳಲಿಲ್ಲ ಅಂದ್ರೆ ಈ ಓತಿಕ್ಯಾತನ್ನ ಎಲ್ಲಿಗೆ ಬಿಡ್ತೀನಿ ಗೊತ್ತಾ?' ಎಂದೊಡನೆ ದಡಬಡಿಸಿ ಮೇಲೆದ್ದ ಜಾರಪ್ಪ ಸೀದಾ ಓಡಿ ಹೋಗಿ ಕೊಡ-ಕ್ಯಾನುಗಳನ್ನು ಪಕ್ಕಕ್ಕೆ ಸರಿಸಿ ಎಕ್ಸೈಸಿನ ಜೀಪಿನೊಳಗೆ ತೂರಿಕೊಂಡ. ಪೋಲೀಸರಿಗೆ ಇನ್ನು ಈ ಸೀನಿನ ಪರದೆ ಬಿತ್ತು ಎಂದೆನಿಸಿ, ಬಸ್ರಾಜ, ಡಿ.ಸಿ. ಸುಬ್ಬ, ಜಬ್ಬ, ಸಂಜೀವರನ್ನು ನಿಲ್ಲಿಸಿ ತಿಕದ ಮೇಲೆ ಲಾಠಿಯಿಂದ ನಾಲ್ಕು ನಾಲ್ಕು ಬಾರಿಸಿ 'ಬೋಳಿಮಕ್ಳೇ, ಕೊಡ, ಕ್ಯಾನ್, ಪಾತ್ರೆಯನ್ನೆಲ್ಲಾ ಹೊತ್ಕಳಿ' ಎಂದವರೇ ಹೊರಡುವುದರಲ್ಲಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248